'ಈ ರೀತಿಯ ಸ್ವೇಚ್ಛಾಚಾರದ ಚಿಂತನೆ ಒಳ್ಳೆಯದಲ್ಲ. ಅದು ನಿನ್ನ ಬದುಕನ್ನ ನೀನು ಊಹಿಸಿರದ ಜಾಗಕ್ಕೆ ಕೊಂಡೊಯ್ಯಬಹುದು' ಎಂದ.

ಅದಕ್ಕವಳು, 'ಹಕ್ಕಿಗಳು ಸ್ವೇಚ್ಛೆಯಾಗಿ ಮೇರೆ ಮೀರಿ ಹಾರಿದರೂ ತಮ್ಮ ಗೂಡಿಗೆ ಮರಳಿ ಬರ್ತಾವೆ ತಾನೆ? ಹಾಗೇ ನನ್ನ ಜೀವನ ಸೇಫ್ ಆಗಿರುತ್ತೆ' ಎಂದು ಹೇಳಿದಳು.

ಹೇಗೆ ಬದುಕಿದರೂ ತನ್ನ ಜೀವನ ಸೇಫ್ ಆಗಿರುತ್ತದೆ ಎಂದು ನಂಬಿರುವವಳಿಗೆ ನಾನು ಹೇಳುವುದೇನಿದೆ ಎಂದು ಅಂದುಕೊಂಡ. 'ನಾನು ಬರ್ತೀನಿ' ಎಂದು ಕುರ್ಚಿಯಿಂದ ಮೇಲೆದ್ದ. 'ಏಯ್ ಕೂತ್ಕೋ, ನಿನಗೂ ಸೇರ್ಸಿ ಅನ್ನ ಮಾಡಿದ್ದೀನಿ' ಎಂದಳು.

ತಟ್ಟೆಗೆ ಅನ್ನ ಸಾರು ಹಾಕಿ, ಅವನ ಕೈಗಿತ್ತು ತಾನೂ ತಟ್ಟೆಯನ್ನು ತೆಗೆದುಕೊಂಡು ಊಟಕ್ಕೆ ಕೂತಳು. ಅನ್ನ ಸಾರು ಕಲೆಸುತ್ತಾ ಕೀಟಲೆ ಮಾಡುವ ದನಿಯಲ್ಲಿ ಕೇಳಿದಳು.

'ರಂಗ ನಿಜ ಹೇಳ್ಬೇಕು. ಮದುವೆಯಾಗದೆ ಮಗು ಕೊಡೋದಾದ್ರೆ ನಾನೇ ಯಾಕಾಗ್ಬಾರ್ದು ಅಂತ ನಿನಗೆ ಅನಿಸಿದ್ಯಾ?'

'ನಾನೇಕೆ ಸುಳ್ಳೇಳ್ಲಿ, ಹಾಗನಿಸಿದ್ದು ನಿಜ'

'ಮತ್ತೆ ನನ್ನತ್ರ ಹೇಳ್ಲೇ ಇಲ್ಲ'

'ನಾನು ಭಾವನಾ ಜೀವಿ. ಸಂಸ್ಕಾರಹೀನನಾಗಿ ಮದುವೆಯಾಗದೇ ನಿನ್ನ ಅನುಭವಿಸಿ, ನಿನ್ನ ಕೈಗೆ ಮಗು ಕೊಡೋಕೆ ನನ್ನಿಂದ ಸಾಧ್ಯವಿಲ್ಲ. ನನ್ನ ಮನಸ್ಸೇ ಬೇರೆ'

'ಮುಚ್ಚು ಮರೆ ಇಲ್ದಿರೋ ನಿನ್ನ ಈ ಗುಣವೇ ಕಣೋ ನನಗಿಷ್ಟವಾಗಿ ನಿನ್ನೊತೆ ಇಷ್ಟು ಸಲಿಗೆಯಿಂದಿರೋದು' ಎಂದವಳು ಊಟ ಮುಗಿಸಿ ಗೋಡೆ ಗಡಿಯಾರದತ್ತ ನೋಡಿದಳು. 'ಇಲ್ಲೇ ಮಲಗೋ ಲೇಟಾಗಿದೆ' ಎಂದಳು.

ಹೊರ ಬಂದು ಚಪ್ಪಲಿ ಹಾಕಿಕೊಳ್ಳುತ್ತ, 'ಪರ್ವಾಗಿಲ್ಲ, ಐದು ನಿಮಿಷದಲ್ಲಿ ರೂಮಲ್ಲಿರ್ತೀನಿ' ಎನ್ನುತ್ತಾ ಬೈಕ್ ಸ್ಟಾರ್ಟ್ ಮಾಡಿ ಹೊರಟ.

*

ರಾಧಾ ಉಡುಪಿ ಕಡೆಯವಳು. ತನ್ನ ತಂದೆ–ತಾಯಿಯನ್ನು ತನ್ನಣ್ಣನ ಬಳಿ ಬಿಟ್ಟು ತನ್ನಿಷ್ಟದಂತೆ ಬದುಕು ಕಟ್ಟಿಕೊಳ್ಳಬೇಕೆಂದು ಹಾಸನಕ್ಕೆ ಬಂದು ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಳು. ದಿನ ಕಳೆದಂತೆ ಅದೇ ಸಂಸ್ಥೆಯಲ್ಲಿ ಕೆಲಸಕ್ಕಿದ್ದ ರಂಗನಾಥ ಮತ್ತವಳ ನಡುವೆ ಸ್ನೇಹ ಏರ್ಪಟ್ಟಿತ್ತು.

ಅವರಿಬ್ಬರಿಗೆ ಇಂದ್ರಿಯಗಳ ಮೇಲೆ ಹಿಡಿತವಿದ್ದರೂ, ಆಡುವ ಮಾತುಗಳಿಗೆ ಮಾತ್ರ ಲಂಗು ಲಗಾಮಿರಲಿಲ್ಲ. ಪ್ರೀತಿ ಪ್ರೇಮ, ಸೆಕ್ಸ್, ದೇಹದಾರ್ಢ್ಯತೆ, ತಾಕತ್ತು ಹೀಗೆ ಎಲ್ಲದರ ಬಗ್ಗೆ 'ಫಿಲ್ಟರ್' ಇಲ್ಲದ ಮಾತುಗಳನ್ನು ಹೊರ ಹಾಕುತ್ತಿದ್ದರು. ಅದೂ ಅವರಿಬ್ಬರೇ ಇದ್ದಾಗ ಮಾತ್ರ.

ಒಮ್ಮೆ ಹೀಗೆ ಮಾತನಾಡುವ ಸಂದರ್ಭದಲ್ಲಿ, 'ಹೊಲ ಉತ್ತು ಸೈ ಅನ್ನಿಸಿಕೊಳ್ಳಕ್ಕಾಗಲ್ಲ. ಹೆಣ್ಣನ್ನು ಸೆಕ್ಸ್‌ನಲ್ಲಿ ತೃಪ್ತಿಪಡಿಸಕ್ಕಾಗಲ್ಲ ಅಂತಾರಲ್ಲ ಅದು ನಿಜವೇ' ಎಂದು ರಂಗನಾಥ ಕೇಳಿದಾಗ ಅವಳು, 'ಹಾಗನ್ನೋರು ಹೆಂಗಸರಿಗೆ ಕಾಮದ ಟೆಂಪರೇಚರ್ ಇಷ್ಟೇ ಇದೆ ಎಂದು ಯಾವ ಯಂತ್ರದಲ್ಲಿ ಅಥವಾ ಟೇಪ್‌ನಲ್ಲಿ ಅಳೆದಿದ್ದಾರಂತೆ?' ಎಂದು ಪ್ರಶ್ನೆ ಹಾಕಿದಳು.

ಅವಳ ಕಲ್ಮಶವಿಲ್ಲದ ನೇರ ನಡೆ- ನುಡಿ ರಂಗನಾಥನಿಗೆ ಪ್ರಿಯವಾಗಿದ್ದರೂ, ಮದುವೆಯಾಗದೇ ಮಗು ಪಡಿತೀನಿ ಎನ್ನುವ ಅವಳ ಮಾತು ಅಸಂಬದ್ಧ, ಅಸಂಗತ ಎನಿಸುತಿತ್ತು.

'ನೋಡೋಕೆ ಚೆನ್ನಾಗಿದ್ದೀಯ, ವಿದ್ಯಾವಂತೆ ಕೂಡ. ಒಳ್ಳೆಯ ಹುಡುಗನನ್ನು ನೋಡಿ ಮದುವೆಯಾಗಿ ನೆಮ್ಮದಿಯಾಗಿರಬಾರದೇ? ಮದುವೆಗೆ ಮುನ್ನವೇ ಬೇರೆಯವರ ಮೋಸಕ್ಕೆ ಅಥವಾ ಅತ್ಯಾಚಾರಕ್ಕೆ ತುತ್ತಾಗಿ ಮಗು ಪಡೆದವರಿದ್ದಾರೆ. ಅಂಥವರ ಬಗ್ಗೆ ಸಮಾಜ ಸ್ವಲ್ಪ ಸಹಾನುಭೂತಿ ತೋರಿಸಬಹುದು. ಆದರೆ ನೀನೇನಾದರೂ ಉದ್ದೇಶಪೂರ್ವಕವಾಗಿ ಮದುವೆಯಾಗದೆ ಮಗುವಿನ ತಾಯಿಯಾದರೆ ಅದಕ್ಕೆ ಕಿಂಚಿತ್ತೂ ಮನ್ನಣೆ ಸಿಗಲ್ಲ. ಆಗ ನಿನ್ನ ಜೀವನ ಅತ್ಯಾಚಾರ ಮಾಡಿದವನಿಗೂ ಅತ್ಯಾಚಾರಕ್ಕೀಡಾದವರಿಗೂ ಕಡೆಯಾಗಿರುತ್ತದೆ'.

'ಲೋ ರಂಗನಾಥ ಮದುವೆಯಾದವರೆಲ್ಲ, ಶ್ರೀರಾಮಚಂದ್ರ ಸೀತೆಯಂಗಿದ್ದಾರೇನೋ? ಮನೆಯಲ್ಲಿರೋರೇ ಬೇರೆ, ಮನಸ್ಸಲ್ಲಿ ಇರೋರೇ ಬೇರೆ. ಈ ಸಮಾಜದಲ್ಲಿ ಮಾನಸಿಕ ವ್ಯಭಿಚಾರಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಗೊತ್ತಾ ನಿನಗೆ. ಅವರಿಗಿಂತ ನಾನು ನೀನು ಉತ್ತಮ ಅಲ್ಲವೇನೋ?'

'ಆದರೂ ಹೆಣ್ಣಿಗಾಗಲಿ, ಗಂಡಿಗಾಗಲಿ ಶ್ರೀರಾಧಾ–ಕೃಷ್ಣರ ಪರಿಶುದ್ಧ ಅಮರ ಪ್ರೇಮ ಆದರ್ಶವಾಗಬೇಕು'

'ಮುಚ್ಕೊಂಡ್ ಕೂತ್ಕೊ. ರುಕ್ಮಿಣಿ, ಸತ್ಯಭಾಮೆಗೆ